**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರ ನ್ಯಾಯಾಲಯ ಚಿಕ್ಕೋಡಿ**

**ಎಸ್ ಸಿ ನಂ. 107/2016**

ಸಿಡಬ್ಲ್ಯು 3 ಪಿಡಬ್ಲ್ಯು- 1

ದಿನಾಂಕಃ 17.12.2022 ರಂದು ಸಾಕ್ಷಿಯನ್ನು ಕರೆಯಿಸಿ
ಪ್ರಮಾಣ ವಚನ ಬೋಧಿಸಲಾಯಿತು.

ಪೂರ್ಣ ಹೆಸರು : ಶಿವಪ್ಪ ಸಿಧ್ರಾಮ ಪೋಗಟ್ಯಾನಟ್ಟಿ
ವಯಸ್ಸು : 55 ವರ್ಷ
ಉದ್ಯೋಗ : ಶೇತ್ಕಿ
ವಾಸ ಸ್ಥಳ : ಕಮತೆನಟ್ಟಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನನಗೆ ಚಾಸಾ-1 ಮತ್ತು 4 ಗೊತ್ತು. ಈ ಕೇಸಿನಲ್ಲಿ ಪೋಲಿಸರು ನನ್ನ ಸಮಕ್ಷಮ ಬೆಳಗಾವಿ ಸಿವಿಲ ಆಸ್ಪತ್ರೆಯಲ್ಲಿ ಮೃತಬಾಲಕೃಷ್ಣನ ಶವ ಪಂಚನಾಮೆ 7 ವರ್ಷದ ಹಿಂದೆ ಮು.11 ರಿಂದ 12 ಗಂಟೆಯವರೆಗೆ ಮಾಡಿ ಪೋಟೋ ತೆಗೆದರು. ಸದರಿ ಪಂಚನಾಮೆ ನೋಡಿದೆ ಇದನ್ನು ನಿಪಿ-1 ಸಾಕ್ಷಿ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ಆ ಪೋಟೋ ನೋಡಿದೆ ಇದನ್ನು ನಿಪಿ-2 ಎಂದು ಗುರುತಿಸಲಾಯಿತು. ಬೇರೆ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಏನೂ ಜಪ್ತಿ ಮಾಡಿಲ್ಲ. ಈಗ ತೋರಿಸಿದ ಗುನ್ನೇ ಜಾಗೆಪಂಚನಾಮೆ ಮೇಲೆ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿಪಿ-3 ಸಾಕ್ಷಿ ಸಹಿ ನಿಪಿ-3(ಎ) ಎಂದು

ಗುರುತಿಸಲಾಯಿತು. ನಿಪಿ-3 ರಲ್ಲಿ ಬರೆದ ವಿಷಯ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೇಳಿಕೊಂಡಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ

31.12.2014 ರಂದು ಪೋಲಿಸರು ನನ್ನ ಮತ್ತು ಚಾಸಾ-4 ರ ಸಮಕ್ಷಮ ಮೃತ ಬಾಲಕೃಷ್ಣನ ಮನೆ ಪಕ್ಕದಲ್ಲಿರುವ ರಸ್ತೆಯ ಮೇಲೆ ಕರೆಸಿ ಚಾಸಾ-1 ತೋರಿಸಿದ ಗುನ್ಹೇ ಜಾಗೆ ಪಂಚನಾಮೆಯನ್ನು ಮ.03 ರಿಂದ 04.15 ರವರೆಗೆ ಮಾಡಿ ಈಗ ತೋರಿಸಿದ ಒಂಭತ್ತು ಬಿದಿರಿನ ಬಡಿಗೆ, ಐದು ಕಲ್ಲುಗಳನ್ನು ಮತ್ತು ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತ ರಹಿತ ಮಣ್ಣನ್ನು ಜಪ್ತಿ ಮಾಡಿ ಅಲ್ಲೇ ನನ್ನ ಸಹಿ ಪಡೆದರು ಅನ್ನುವುದು ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ-</u>** ಆರೋಪಿ ಪರ ಶ್ರೀ ಎಲ್.ಬಿ.ಪಿ ವಕೀಲರಿಂದಃ-

ನನ್ನ ಸಮಕ್ಷಮ ಶವ ಪಂಚನಾಮೆ ಮಾಡಿದ್ದಾರೆ. ಆ ಪಂಚನಾಮೆಗೆ ನಾನು ಮಾಹಿತಿ ಕೊಟ್ಟಿಲ್ಲ. ಪೋಲಿಸರು ಬರೆದ ಪಂಚನಾಮೆ ಮೇಲೆ ಸಹಿ ಮಾಡು

ಎಂದಾಗ ಮಾಡಿದ್ದೇನೆ ಅನ್ನುವುದು ನಿಜ. ನಿಲ್ಲು ಎಂದು ನಿಂತಾಗ ಫೋಟೋ ತೆಗೆದರು ಅನ್ನುವುದು ನಿಜ. ಪಂಚನಾಮೆಗಳಲ್ಲಿ ಬರೆದ ವಿಷಯ ಗೊತ್ತಿಲ್ಲ ಅನ್ನುವುದು ನಿಜ.

**ಮರು ಮುಖ್ಯ ವಿಚಾರಣೆ** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೇ ಕೆ ಸರಿ ಇದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.